# ಇಸ್ಪೀಟಾಯಣ

■ ಉಷಾ ನರಸಿಂಹನ್



ಸುಭದ್ರೆಯ ಗರ್ಭದಲ್ಲಿರುವಾಗಲೆ ಅಭಿಮನ್ಯುವಿಗೆ ಚಕ್ರವ್ಯೂಹ ಭೇದಿಸುವ ಪಾಠವಾಗಿತ್ತಂತೆ. ಕೃಷ್ಣ ತನ್ನ ತಂಗಿಗೆ ಚಕ್ರವ್ಯೂಹವನ್ನು ಒಡೆಯುವುದರ ಕುರಿತು ಹೇಳುತ್ತಿರುವಾಗ ಬಸುರಿ ಸುಭದ್ರೆ ನಿದ್ದೆ ಮಾಡಿಬಿಟ್ಟಿದ್ದಳಂತೆ. ಆದರೂ 'ಹುಂ... ಹುಂ...' ಎಂಬ ಧ್ವನಿ ಕೇಳಿಬರುತ್ತಿತ್ತಂತೆ. ಅವಳ ಗರ್ಭದಲ್ಲಿದ್ದ ಅಭಿಮನ್ಯು ಜಾಗೃತಾವಸ್ಥೆಯಲ್ಲಿ ಎಲ್ಲವನ್ನು ಕೇಳಿ ಅರ್ಥೈಸಿಕೊಂಡನಂತೆ. ಆ ಮಾತು ಎಷ್ಟು ನಿಜವೋ ನನಗೆ ಗೊತ್ತಿಲ್ಲ. ಆದರೆ ಕಮಲಮ್ಮನೆಂಬ ನಮ್ಮ ಅಜ್ಜಿಯ ವಂಶಸ್ಥರಿಗೆಲ್ಲ (ಹತ್ತು ಮಕ್ಕಳು, ಮೂವತ್ತಕ್ಕೂ ಹೆಚ್ಚು ಮೊಮ್ಮಕ್ಕಳು) ಇಸ್ಪೀಟ್ ಆಟ ವಂಶವಾಹಿನಿಯಲ್ಲೇ ಬಂದಿದೆ. ಮೊಮ್ಮಕ್ಕಳೆಲ್ಲ ತಾಯಂದಿರ ಗರ್ಭದಲ್ಲಿರುವಾಗಲೇ ಈ ಪಾಠ ಅವರಿಗೆ ದತ್ತವಾಗಿರುತ್ತಿತ್ತು. ತಂದೆತಾಯಿ, ಚಿಕ್ಕಪ್ಪ ಚಿಕ್ಕಮ್ಮ, ಅತ್ತೆಯರು... ಎಲ್ಲರೂ ಸೇರಿ ರಮ್ಮಿ ಆಡುವ ಹಿನ್ನೆಲೆಯಲ್ಲಿ ವಂಶವಾಹಿನಿಯಲ್ಲಿ ಹರಿದು ಬರುವ ರಕ್ತದೊತ್ತಡ, ಮಧುಮೇಹದ ಜೊತೆ ಇಸ್ಪೀಟೂ ಕರತಲಾಮಲಕವಾಗಿರುತ್ತದೆ.

ಹದಿಮೂರು ಕಾರ್ಡಿನ ರಮ್ಮಿಯ ಪ್ರತಿ ಆಟದಲ್ಲೂ ಹಣ ಎಣಿಸುವ ಕಟಿಪಿಟಿ ಏನಿಲ್ಲ. ಒನ್‌ಟೈಮ್ ಇನ್ವೆಸ್ಟ್‌ಮೆಂಟ್ ಆದ ಜಾಕ್‌ಪಾಟ್ ಆಟವೇ ನಮ್ಮ ಖಾನ್‌ದಾನಿಗೆ ಅಚ್ಚುಮೆಚ್ಚು. ಕೆಲವರು ಹದಿಮೂರು ಕಾರ್ಡು ಭಾರವೆಂದು ಮೂರೆಲೆ ಆಡುತ್ತಾರೆ. ನನಗೇನೋ ಹದಿಮೂರು ಕಾರ್ಡಿನ ಜಾಕ್‌ಪಾಟ್ ಸಂತೋಷ ಮತ್ತು ಅದೇ ನಮಗೆಲ್ಲ ಪರಮ ಮೋಕ್ಷದ ದಾರಿ.

ಹಿಂದೆಲ್ಲ ಎಲ್ಲರೂ ನೌಕರಿಯಲ್ಲಿದ್ದಾಗ ಅಪರೂಪದ ಮದುವೆ, ಮುಂಜಿಗಳಲ್ಲಿ ಆಡುತ್ತಿದ್ದರು. ರಿಟೈರ್ ಆದ ಮೇಲೆ 'ಅಪರೂಪ'ದ್ದು 'ನಿತ್ಯ ನಿಜರೂಪ'ವಾಯ್ತು. ಬಹುತೇಕ ಎಲ್ಲರೂ ಮೈಸೂರಲ್ಲೇ ತಮ್ಮ ನಿವೃತ್ತ ಜೀವನದ ನೆಲೆ ಕಂಡುಕೊಂಡ ಕಾರಣ ವಾರಕ್ಕೊಂದಾವರ್ತಿ ಯಾರದಾದರೊಬ್ಬರ ಮನೆಯಲ್ಲಿ ಸೇರುವುದು, ಬೆಳಿಗ್ಗೆ ಹತ್ತರಿಂದ ರಾತ್ರಿ ಹತ್ತರವರೆಗೆ ಇಸ್ಪೀಟಾಡುವುದು, ಆಮೇಲೆ ಅಲ್ಲೇ ಊಟ ಮುಗಿಸಿ ಮನೆ ಸೇರುವುದು ಮಾಮೂಲಾಯಿತು. ಕಡೆಯಪಕ್ಷ ವಾರಕ್ಕೆ ಒಂದಾವರ್ತಿಯಾದರೂ ಎಲ್ಲರೂ ಇಸ್ಪೀಟಾಡುವ ಭಾಗ್ಯಕ್ಕೆ ಎರವಾಗಬಾರದೆಂದು ಅಲಿಖಿತ ಒಡಂಬಡಿಕೆಯಾಯಿತು. ಆಟವೆಂದರೆ ಸುಮ್ಮನೆ ಆಡಲಾಗುತ್ತದೆಯೆ? ಒಂದಿಷ್ಟು ಪಣಂ... ಅಂದರೆ ಹಣ! ಮೊದಮೊದಲು ಐವತ್ತು ರೂಪಾಯಿಯ ಜಾಕ್‌ಪಾಟ್ ಆಡುತ್ತಿದ್ದರು. ಆಮೇಲೆ ನೂರು ರೂಪಾಯಿಗೆ ಬಂತು. ಈಗೆಲ್ಲ ಇನ್ನೂರರಿಂದ ಐನೂರರವರೆಗೆ... ಸೋತರೆ ಸಂಕಟವಾದರೂ ಯಾರೂ ಹೇಳಿಕೊಳ್ಳುವುದಿಲ್ಲ. 'ಅಯ್ಯೋ... ಮನೆಯೋರಿಗೆ ತಾನೆ ಸೇರಿದ್ದು' ಎಂಬ ವೇದಾಂತದ ಮಾತುಗಳನ್ನುದುರಿಸಿ ನೋವು ಮರೆಯುತ್ತಾರೆ.

ನನ್ನ ತಂದೆಯವರು ಸರ್ವೀಸಿನಲ್ಲಿದ್ದ ಕಾಲ. ಆಗಾಗ್ಗೆ ತುಮಕೂರಿನ ಕೆ.ಇ.ಬಿ. ಕ್ಲಬ್ಬಿನಲ್ಲಿ ಇಸ್ಪೀಟಾಡುತ್ತಿದ್ದರು. ತಮ್ಮ ತಾಯಿಗೆ ಯಾಕೋ ಇಷ್ಟವಾಗಲಿಲ್ಲ. 'ಆಡುವುದಾದರೆ ವಾರಕ್ಕೆ ಒಂದು ದಿನ ಮಾತ್ರ ಆಡಿ' ಅಂತ ಷರತ್ತು ವಿಧಿಸಿದರು. ಹೆಂಡತಿಯ ಷರತ್ತು ಅಂಗೀಕರಿಸದ ಪುರುಷರುಂಟೆ? ಸರಿ, ನಮ್ಮ ತಂದೆ ಪ್ರತಿ ಶನಿವಾರ ಸಂಜೆ ಮಾತ್ರ ಇಸ್ಪೀಟಿಗೆ ಹೋಗಲು ಪರವಾನಗಿ ಇತ್ತು. ಕೆಲಸ ಮುಗಿಸಿ ಮನೆಗೆ ಬಂದು ಸುಮಾರು ಏಳು ಗಂಟೆಗೆ ಕ್ಲಬ್ಬಿಗೆ ಹೋಗಿ ಹತ್ತರ ಸುಮಾರಿಗೆ ಮನೆಗೆ ಬರುತ್ತಿದ್ದರು. ಅವರ ಮುಖದ ಬಣ್ಣ ನೋಡಿಯೇ ನನ್ನ ತಾಯಿಗೆ ಅವರು ಆ ದಿನ ಎಷ್ಟು ಹಣ ಸೋತಿರಬಹುದೆಂದು ಗೊತ್ತಾಗುತ್ತಿತ್ತು. ಅಮ್ಮ ಒಳ್ಳೆ ಗಾಯಕಿ... ಸುಶ್ರಾವ್ಯವಾಗಿ ಅಪ್ಪ ಬಂದು ಪ್ಯಾಂಟಿನಿಂದ ಪಂಚೆಗೆ ಬದಲಾಯಿಸಿ 'ತಟ್ಟೆ ಹಾಕು' ಎನ್ನುತ್ತಿದ್ದರು. ತಟ್ಟೆ ಹಾಕುತ್ತಾ ಅಮ್ಮ ಲಯಬದ್ಧವಾಗಿ 'ಔರಂಗಚೌರವನ್ನು ಮಾಡಿಕೊಂಡೆ ಮಾಡಿಕೊಂಡೆ ಎಂದಿತು ಕೋಳಿ ಮರಿ' ಅನ್ನುತ್ತಿದ್ದರು. ಮೊದಲೇ ಯುರೋಪಿಯನ್ನರಂತೆ ಕೆಂಪಾಗಿದ್ದ ಅಪ್ಪ ಸಿಟ್ಟಿನಿಂದ ಇನ್ನೂ ಕೆಂಪು ಕೆಂಪಾಗಿ 'ಸ್ವಲ್ಪ ಸುಮ್ನೆ ಇರ್ತೀಯ' ಅನ್ನಬೇಕು... ಅಮ್ಮ 'ಅಯ್ಯೋ... ಈ ಮನೇಲಿ ನಂಗೆ ಒಂದು ಹಾಡು ಹೇಳಕ್ಕೂ ಸ್ವತಂತ್ರವಿಲ್ಲ' ಅನ್ನುತ್ತಾ ನಗಬೇಕು. ಅಮ್ಮನ ಜೊತೆ ಅಪ್ಪನೂ ನಕ್ಕರೆ ಅಲ್ಲೇ ಕತೆ ಪುಸ್ತಕದ ಮರೆಯಲ್ಲಿ ಮುಖವಡಗಿಸಿ ಕೂತಿರುತ್ತಿದ್ದ ನಾನೂ ಜೋರಾಗಿ ನಗಬೇಕು! ಇಸ್ಪೀಟಲ್ಲಿ ಹಣ ಕಳೆದುಕೊಂಡ ನೋವು ಕೋಪಗಳು ನಗೆಯ ಕಾರಣವಾಗಿ ಹುಡಿ ಹಾರುತ್ತಿತ್ತು!

ಮೈಸೂರಲ್ಲಿ ಹತ್ತುಜನ ಅಕ್ಕತಂಗಿಯರು, ಅಣ್ಣತಮ್ಮಂದಿರು ಒಟ್ಟಾಗಿ ಇಸ್ಪೀಟಾಡುತ್ತಿದ್ದ ಕಾಲವೊಂದಿತ್ತು. ಏನಾದರು ನೆಪ ಮಾಡಿಕೊಂಡು ಒಟ್ಟು ಸೇರುತ್ತಿದ್ದರು. ಭರ್ಜರಿಯಾಗಿ ಇಸ್ಪೀಟಾಟುತ್ತಿದ್ದರು. ನನ್ನ ಒಬ್ಬರು ಸೋದರತ್ತೆಯ ಯಜಮಾನರಿಗೆ ತಮ್ಮ ಹೆಂಡತಿ ಹಾಗೆಲ್ಲ ಇಸ್ಪೀಟಿಗೆ ಹೋಗುವುದು ಸುತರಾಂ ಇಷ್ಟವಿರಲಿಲ್ಲ. ನಮ್ಮ ಅತ್ತೆಯವರೋ ಕೂಲ್! ಯಾವತ್ತೂ ಪತಿಯ ವಿರುದ್ಧ ಮಾತಾಡಿದವರಲ್ಲ. ದನಿ ಎತ್ತರಿಸಿದವರೂ ಅಲ್ಲ. ವಿಧೇಯ ವಿದ್ಯಾರ್ಥಿನಿಯಂತೆ ಸದಾ ನಗುವ ಹಸನ್ಮುಖಿ. ಅವರಿಗೆ ಇಸ್ಪೀಟಿನಲ್ಲಿ ಅದಮ್ಯ ಒಲವು, ಪಾಂಡಿತ್ಯ. ಅದು ತುಂಬ ಸಹಜವಾಗಿ ಬಂದಿದ್ದು. ದೈವದತ್ತವಾದ ಪ್ರತಿಭೆ, ವಂಶಪಾರಂಪರ್ಯವಾದ